ಸಿ.ಸಿ. ನಂಃ 865/2020
ಪಿ.ಡಬ್ಲ್ಯೂ: 01

**<u>ದಿನಾಂಕಃ 10.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು</u>**

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ</u>**

<u>ಮುಂದುವರೆದ ಪಾಟೀ ಸವಾಲು : ಶ್ರೀ. ವಿ.ಎಸ್.ಆರ್. ಆರೋಪಿ ಪರ ವಕೀಲರಿಂದ</u>

ನನ್ನ ಪಿರ್ಯಾದಿಯಲ್ಲಿ 2 ನೇ ಪುಟದ 3 ನೇ ಪ್ಯಾರಾದಲ್ಲಿ 6 ನೇ ಸಾಲಿನಲ್ಲಿ 15 ಸಂಖ್ಯೆಗಳುಳ್ಳ ನನ್ನ ಖಾತೆ ನಂಬರ್ ನಮೂದಾಗಿದ್ದು, ಅದು ತಪ್ಪಾಗಿರುತ್ತದೆ. ಸಾಕ್ಷಿಯು ಮುಂದುವರೆದ 15 ಸಂಖ್ಯೆಗಳಲ್ಲಿ 2 ನೇ ಸಂಖ್ಯೆ 3 ಆಗಬೇಕಾಗಿತ್ತು ಆದರೆ 8 ಎಂದು ನಮುದಾಗಿದೆ ಎಂದು ನುಡಿದಿರುತ್ತಾರೆ. ಪಿರ್ಯಾದಿಯಲ್ಲಿ ನಮೂದಾಗಿರುವ ಖಾತೆ ನಂಬರ್ ನಿಮಗೆ ಸೇರಿರುತ್ತದೆಯೇ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿದಿರುತ್ತಾರೆ. ಇಂಡಿಯನ್ ಓವರ್ಸಿಸ್ ಬ್ಯಾಂಕ್ ನಲ್ಲಿ ಸಾಮಾನ್ಯವಾಗಿ 16 ಸಂಖ್ಯೆಗಳುಳ್ಳ ಖಾತೆ ನಂಬರ್ ಇರುತ್ತದೆ ಎಂದರೆ ಸಾಕ್ಷಿಯು 15 ಸಂಖ್ಯೆಗಳು ಇರುತ್ತವೆ ಎಂದು ನುಡಿದಿರುತ್ತಾರೆ. ಪಿರ್ಯಾದಿನಲ್ಲಿ ನಮುದಿಸಿರುವ ಖಾತೆ ನಂಬರ್ 15 ಸಂಖ್ಯೆ ಹೊಂದಿರುತ್ತದೆ ಸದರಿ ಖಾತೆ ನನ್ನದಲ್ಲ ಎಂದರೆ ಸರಿ. ದೂರಿನ 3 ನೇ ಪುಟದಲ್ಲಿ ಆರೋಪಿಗೆ ದಿ: 27.01.2020 ರಂದು ಆರೋಪಿ ನೋಟಿಸ್ ನ್ನು ನಿರಾಕರಿಸಿರುತ್ತಾನೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಆರೋಪಿ ದಿ 27.01.2020 ರಂದು ನೋಟಿಸ್ ನ್ನು ನಿರಾಕರಿಸಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಯಾವ ದಾಖಲೆಯನ್ನು ಸಲ್ಲಿಸಿರುತ್ತಿರಾ ಎಂದು ಕೇಳಿದ ಪ್ರಶ್ನೆಗೆ ಚೆಕ್ ಮತ್ತು ಪಾಸ್ ಬುಕ್ ನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನೊಟಿಸ್ ನಿರಾಕರಿಸುವ ಬಗ್ಗೆ ಚೆಕ್ ಮತ್ತು ಪಾಸ್ ಬುಕ್ ಸಮಂಜಸವಾದ ದಾಖಲೆ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಬಹಳ ದಿನ ಆಗಿರುತ್ತದೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಚೆಕ್ ಮತ್ತು ಪಾಸ್ ಬುಕ್ ನ್ನು ಹೊರತು ಪಡಿಸಿ ನಾನು ನ್ಯಾಯಾಲಯಕ್ಕೆ ಬೇರೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ. ಚೆಕ್ ಮತ್ತು ಪಾಸ್ ಬುಕ್ ನ್ನು ಹೊರತು ಪಡಿಸಿ ಬೇರೆ ದಾಖಲೆಗಳ ಬಗ್ಗೆ ನನಗೆ ಯಾವುದೇ ಜ್ಞಾನ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದ 6 ವರ್ಷಗಳು ಆಗಿರುವ ಕಾರಣ ಜ್ಞಾಪಕ ಇರುವುದಿಲ್ಲ.

ದೂರಿನಲ್ಲಿ ನಮೂದಾಗಿರುವ ಖಾತೆ ಸಂಖ್ಯೆಯೇ ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ–6 ನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ದಿ: 31.01.2020 ರಂದು ವಸ್ತು ಜಾರಿ ಆಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು

ನೆನಪಿಲ್ಲ ಎಂದು ನುಡಿದಿರುತ್ತಾರೆ. ನಿಪಿ-6 ದಾಖಲೆಯನ್ನು ಇದೇ ಮೊದಲನೇ ಬಾರಿಗೆ ನೊಡಿರುತ್ತೀರಿ ಎಂದರೆ ಸರಿ. ಸಾಕ್ಷಿಯು ಆಂಗ್ಲ ಭಾಷೆಯಲ್ಲಿರುವುದರಿಂದ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ-6 ಈ ಪ್ರಕರಣಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆಂಗ್ಲ ಭಾಷೆಯಲ್ಲಿರುವುದರಿಂದ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿದಿರುತ್ತಾರೆ. ದೂರು ಆಂಗ್ಲ ಭಾಷೆಯಲ್ಲಿದ್ದು, ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಲ್ಲ ಎಂದರೆ ಸಾಕ್ಷಿಯು ಆಂಗ್ಲ ಭಾಷೆಯಲ್ಲಿರುವ ಅಂಕಿ ಸಂಖ್ಯೆಗಳನ್ನು ಹೊರತು ಪಡಿಸಿ ಬೇರೆ ವಿಷಯ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂಧರೆ ಸರಿ. ಸಾಕ್ಷಿಯು ಆಂಗ್ಲ ಭಾಷೆಯಲ್ಲಿರುವುದರಿಂದ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿದಿರುತ್ತಾರೆ.

ಚೆಕ್ಕಿನ ಮೊತ್ತ, ದಿನಾಂಕವನ್ನು ದೂರಿನಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ. ಚೆಕ್ಕಿನ ಮೊತ್ತ ಮತ್ತು ದಿನಾಂಕವನ್ನು ಹೊರತು ಪಡಿಸಿ ದೂರಿನಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ನಮುದಾಗಿರುವ ಬೇರೆ ವಿಷಯದ ಬಗ್ಗೆ ನನಗೆ ಜ್ಞಾನ ಇಲ್ಲ ಎಂಧರೆ ಸರಿ. ಚೆಕ್ಕಿನ ಮೊತ್ತ ಮತ್ತು ದಿನಾಂಕವನ್ನು ಮಾತ್ರ ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ ಮತ್ತು ಇದನ್ನು ಹೊರತು ಪಡಿಸಿ ಬೇರೆ ಯಾವುದೇ ವಿಚಾರವನ್ನು ಹೇಳಿಲ್ಲ ಎಂಧರೆ ಸಾಕ್ಷಿಯು ಮೊತ್ತವನ್ನು ಹೇಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. 3 ನೇ ಪುಟದ 6 ನೇ ಪ್ಯಾರಾದಲ್ಲಿ ನ್ಯಾಯಾಲಯದ ಶುಲ್ಕವನ್ನು ಪಾವತಿಸಿರುವುದಾಗಿ ನಮೂದು ಇದೆ ಎಂಧರೆ ಸರಿ. ಆದರೆ ಎಷ್ಟು ಶುಲ್ಕವನ್ನು ಪಾವತಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಯಾವುದೇ ನ್ಯಾಯಾಲಯದ ಶುಲ್ಕವನ್ನು ಪಾವತಿಸದೇ ಇದ್ದರೂ ಸುಳ್ಳಾಗಿ ದೂರಿನಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಶುಲ್ಕವನ್ನು ಕೇಳಿದ್ದರೂ ನಾನು ನೀಡಿದ್ದೇನೆ ಎಂದು ನುಡಿದಿರುತ್ತಾರೆ.

ದಿ: 11.10.2022 ರಂದು ನಾನು ಮತ್ತು ಆರೋಪಿ ಜಂಟಿ ರಾಜೀ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ನಾನು ಮತ್ತು ಆರೋಪಿ ಹಿರಿಯ ಮಾರ್ಗದರ್ಶನದಂತೆ ಪ್ರಸ್ತುತ ಪ್ರಕರಣವನ್ನು ರೂ. 4,25,000/- ಗಳಿಗೆ ರಾಜೀ ಮಾಡಿಕೊಳ್ಳಲು ಒಪ್ಪಿಕೊಂಡಿರುತ್ತೇವೆ ಎಂಧರೆ ಸರಿ. ಸದರಿ ರಾಜೀ ಅರ್ಜಿಯಲ್ಲಿ ಆರೋಪಿಯ 2 ಇಂಡಿಯನ್ ಓವರ್ಸಿಸ್ ಬ್ಯಾಂಕ್ ಗೆ ಸೇರಿದ 2 ಖಾಲಿ ಚೆಕ್ಕುಗಳನ್ನು ಆರೋಪಿಗೆ ಹಿಂದಿರುಗಿಸುತ್ತೇನೆ ಎಂದು ಬರೆಸಿರುತ್ತೇನೆ ಎಂದರೆ ನೆನಪಿಲ್ಲ, ಸಾಕ್ಷಿಯು ನನ್ನ ತಮ್ಮನಿಂದ ಆರೋಪಿ ವಾಪಸ್ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ 2 ಖಾಲಿ ಚೆಕ್ಕುಗಳು ನನ್ನ ಸುಪರ್ದಿಯಲ್ಲಿರುತ್ತವೆ. ನಾನು ಇಲ್ಲದ ವೇಳೆ ನನ್ನ ತಮ್ಮನಿಂದ ಆ

ಎರಡು ಚೆಕ್ಕುಗಳನ್ನು ಆರೋಪಿ ಪಡೆದಿರುತ್ತಾನೆ. ಆರೋಪಿ ನನ್ನ ತಮ್ಮನಿಂದ ಯಾವ ದಿನಾಂಕದಂದು ಸದರಿ ಚೆಕ್ಕುಗಳನ್ನು ಪಡೆದಿರುತ್ತಾನೆ ಎಂದು ನನಗೆ ನೆನಪಿಲ್ಲ. ಅಂದಾಜು ಆಗಲೀ ಸಹ ನನಗೆ ವರ್ಷವನ್ನು ಹೇಳಲು ಆಗುವುದಿಲ್ಲ. ಸಾಕ್ಷಿಯು ರಾಜೀಯ ನಂತರ ಆರೋಪಿ ಪಡೆದಿರುತ್ತಾನೆ ಎಂದು ನುಡಿದಿರುತ್ತಾನೆ. ರಾಜೀಯ ನಂತರ ಚೆಕ್ಕುಗಳನ್ನು ಹಿಂಪಡೆದ ನಿಖರವಾದ ದಿನಾಂಕ ಹೇಳಲು ಆಗುವುದಿಲ್ಲ. ನನ್ನ ತಮ್ಮನ ಹೆಸರು ಪ್ರಕಾಶ. ನಾನು ನನ್ನ ತಮ್ಮ ಪ್ರಕಾಶನಿಗೆ ಆರೋಪಿಯಿಂದ ಹಣವನ್ನು ಸ್ವೀಕರಿಸಿ ಚೆಕ್ಕುಗಳನ್ನು ನೀಡಲು ಹೇಳಿರುವುದಿಲ್ಲ. ಆದರೆ, ನನ್ನ ತಮ್ಮ ನೀಡಿರುತ್ತಾನೆ. ನನ್ನ ತಮ್ಮ ಸದರಿ ವಿಚಾರವನ್ನು 15 ದಿನಗಳ ನಂತರ ತಿಳಿಸಿರುತ್ತಾನೆ.

ಆರೋಪಿಗೆ ಸಂಬಂಧಿಸಿದ ಪ್ರಾಮಿಸರಿ ಪತ್ರ ಇಂದಿಗೂ ನನ್ನ ಬಳಿ ಇವೆ ಎಂದರೆ ಸರಿಯಲ್ಲ. ಆರೋಪಿಗೆ ಸಂಬಂಧಿಸಿದ ಪ್ರಾಮಿಸರಿ ಪತ್ರ ನನ್ನ ಬಳಿ ಇರುವುದಾಗಿ ರಾಜೀ ಅರ್ಜಿಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನನಗೆ ನೆನಪಾಗುತ್ತಿಲ್ಲ ಎಂದು ನುಡಿದಿರುತ್ತಾರೆ. ನನಗೆ ರೂ. 25,000/- ನೀಡಿರುವುದಾಗಿ ನನ್ನ ತಮ್ಮನ ಬಳಿ ಹೇಳಿ ಆರೋಪಿಗೆ ಸೇರಿದ ಚೆಕ್ಕುಗಳನ್ನು ತೆಗೆದುಕೊಂಡು ಹೋಗಿರುತ್ತಾನೆ. ನನ್ನ ಸುಪರ್ದಿಯಲ್ಲಿದ್ದ ಆರೋಪಿಯ ಚೆಕ್ಕುಗಳು ಹೇಗೆ ನನ್ನ ತಮ್ಮನ ಬಳಿ ಹೋಯಿತು ಎಂದರೆ ಸಾಕ್ಷಿಯು ನನ್ನ ಬೀರುವಿನಲ್ಲಿಟ್ಟಿದ್ದೇ ಆದರೆ ಬೀಗವನ್ನು ಹಾಕಿಲ್ಲದ ಕಾರಣ ನನ್ನ ತಮ್ಮ ಆರೋಪಿಗೆ ನೀಡಿರುತ್ತಾನೆ ಎಂದು ನುಡಿದಿರುತ್ತಾರೆ. ಆರೋಪಿ ನನ್ನ ತಮ್ಮನ ಬಳಿ ಹೋಗಿಲ್ಲ ಮತ್ತು ಚೆಕ್ಕುಗಳನ್ನು ಹಿಂಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ತಮ್ಮನಿಂದ ಚೆಕ್ಕನ್ನು ಹಿಂಪಡೆಯಲಾಗಿದೆ ಎನ್ನಲಾದ ದಿನಾಂಕದಂದು ಆರೋಪಿ ಮತ್ತು ನನ್ನ ತಮ್ಮನ ಮಧ್ಯ ಆದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿ ರಾಜೀಯ ಅರ್ಜಿಯಂತೆ ರೂ. 45,000/- ಗಳನ್ನು ನನಗೆ ನೀಡಿರುತ್ತಾನೆ ಎಂಧರೆ ಸಾಕ್ಷಿಯು ನನಗೆ 25,000/- ನೀಡಿರುವುದು ನೆನಪಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ.

ಆರೋಪಿಯಿಂದ 45000/- ಗಳನ್ನು ರಾಜಿಯಂತೆ ಪಡೆದಿರುವುದಾಗಿ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಮೆಮೋವನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿ ನನಗೆ ರೂ. 25000/- ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ರೂ. 25000/- ಗಳನ್ನು ಮಾತ್ರ ಆರೋಪಿಯಿಂದ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಆರೋಪಿಯಿಂದ 45000/- ಗಳನ್ನು ಪಡೆದರು

25000/- ಗಳನ್ನು ಮಾತ್ರ ಪಡೆದಿರುವುದಾಗಿ ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಬಹಳ ದಿನ ಆಗಿರುವ ಕಾರಣ ನೆನಪಿಲ್ಲ ಎಂದು ನುಡಿದಿರುತ್ತಾರೆ. ರಾಜಿಯಂತೆ ಆರೋಪಿ ನೀಡಬೇಕಾಗಿದ್ದ ರೂ. 4,25,000/-ಗಳಲ್ಲಿ 45,000/- ಗಳನ್ನು ಆರೋಪಿ ನೀಡಿರುತ್ತಾನೆ ಎಂದರೆ ನನಗೆ 25000/- ಗಳನ್ನು ಮಾತ್ರ ನೀಡಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ನನ್ನ ಸಂಬಂಧಿಕ ಗೋವಿಂದರೆಡ್ಡಿ ಮುಖಾಂತರ ಆರೋಪಿಯ ವಿರುದ್ಧ 925593 ಚೆಕ್ಕಿಗೆ ಸಂಬಂಧಿಸಿದಂತೆ ರೂ. 2,00,000/-ಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗೋವಿಂದರೆಡ್ಡಿಯವರದ್ದು ವೆಂಕಟಾಪುರ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಆರೋಪಿಯು ನನ್ನ ತಮ್ಮನಿಗೆ ರಾಜೀಯ ಸಂಪೂರ್ಣ ಹಣವನ್ನು ನೀಡಿ ತನ್ನ ಚೆಕ್ಕುಗಳನ್ನು ಹಿಂಪಡೆದಿರುತ್ತಾನೆ ಎಂಧರೆ ಸಾಕ್ಷಿಯು 25000/- ಗಳನ್ನು ನನಗೆ ನೀಡಿರುವುದಾಗಿ ತಿಳಿಸಿ ನನ್ನ ತಮ್ಮನಿಂದ ಚೆಕ್ಕುಗಳನ್ನು ಆರೋಪಿ ಹಿಂಪಡೆದಿರುತ್ತಾನೆ ಎಂಧು ನುಡಿದಿರುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಜೊತೆ ಯಾವುದೇ ವ್ಯವಹಾರ ಆಗದೇ ಇದ್ದರೂ ಸಹ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಕರಣವನ್ನು ಮುಂದುವರೆಸುತ್ತಿದ್ದೇನೆ ಎಂಧರೆ ಸರಿಯಲ್ಲ. ನನ್ನ ತಮ್ಮನನ್ನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿ ಮಾಡಿರುವುದಿಲ್ಲ. ಸತ್ಯಾಂಶ ಮುಚ್ಚಿಡಲು ಈ ಪ್ರಕರಣದಲ್ಲಿ ನನ್ನ ತಮ್ಮನನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂಧರೆ ಸರಿಯಲ್ಲ. ಸದರಿಯವರನ್ನು ಸಾಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಕಾನೂನು ಸಮ್ಮತವಲ್ಲದ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ಔಷದಿಯ ಬಾಬ್ತು ನಾನು ರೂ. 1,69,440/- ಗಳ ಬಾಕಿ ನೀಡಬೇಕು ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೇ.ಸರಿ ಇದೆ.

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**

**ಮೊಳಕಾಲ್ಮೂರು**